ಸಂಖ್ಯೆ: ಸಶಿಅ/ಹೆ.ಮ.ಶಿ/ಮೀನಾ ಕಾರ್ಯಕ್ರಮ/2013-14 ದಿನಾಂಕ: 15.07.2013

# ಸುತ್ತೋಲೆ

ವಿಷಯ:2013-14ನೇ ಸಾಲಿನಲ್ಲಿ ಮೀನಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಬಗ್ಗೆ

ಉಲ್ಲೇಖ: 2013-14ನೇ ಸಾಲಿನ ಪಿ.ಎ.ಬಿ ನಡವಳಿ

-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದಲ್ಲಿನ 2013-14ನೇ ಸಾಲಿನ ಭಾರತ ಸರ್ಕಾರದ ಪಿ.ಎ.ಬಿ (ಪ್ಯಾನೆಲ್ ಅಪ್ರೂವಲ್ ಬೋರ್ಡ್)ನಲ್ಲಿ ಹೆಣ್ಣು ಮಕ್ಕಳ ಶಿಕ್ಷಣದಡಿಯಲ್ಲಿ ಮೀನಾ ಕಾರ್ಯಕ್ರಮಕ್ಕಾಗಿ ಪಿ.ಎ.ಬಿಯಲ್ಲಿ ಅನುದಾನವು ಮಂಜೂರಾಗಿರುವುದಿಲ್ಲ. ಆದಾಗ್ಯೂ ಈ ಕಾರ್ಯಕ್ರಮವನ್ನು ಶಾಲಾ ಹಂತದಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮೀನಾ ತಂಡಗಳು ಸಕ್ರಿಯವಾಗಿ ಹಿಂದಿನ ಸಾಲಿನಂತೆ ಕಾರ್ಯ ಪ್ರವೃತ್ತಗೊಳಿಸಲು ಸೂಚಿಸಿದೆ. ಹೆಚ್ಚಿನ ಸಂದರ್ಭಗಳಲ್ಲಿ ಮೀನಾ ಕಾರ್ಯಕ್ರಮ ನಡೆಸಲು ಯಾವುದೇ ಅನುದಾನದ ಅವಶ್ಯಕತೆ ಇರುವುದಿಲ್ಲ. ಮೀನಾ ತಂಡದ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಕೈಗೊಂಡು, ಸಮುದಾಯದಲ್ಲಿ ಜಾಗೃತಿ ಮೂಡಿಸಿ, ಬಾಲಕಿಯರ ಶಿಕ್ಷಣಕ್ಕೆ ಉತ್ತೇಜನ ದೊರಕಿಸಲು ಸೂಚಿಸಿದೆ. ಮೀನಾ ತಂಡದ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ವಿವರವಾದ ಮಾರ್ಗಸೂಚಿಯನ್ನು ಅನುಬಂಧ-[illegible]ಲ್ಲಿ ನೀಡಿದೆ. ಅದರಂತೆ ಶಾಲಾ ಹಂತದಲ್ಲಿ ಕ್ರಮ ಕೈಗೊಳ್ಳಲು ಸೂಚಿಸಿದೆ.

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು

**ಪ್ರತಿಯನ್ನು**

1. ಜಿಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ, ಎಲ್ಲಾ ಜಿಲ್ಲೆಗಳಿಗೆ ಮುಂದಿನ ಕ್ರಮಕ್ಕಾಗಿ.
2. ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ, ಎಲ್ಲಾ ಜಿಲ್ಲೆಗಳಿಗೆ ಮುಂದಿನ ಕ್ರಮಕ್ಕಾಗಿ

**ಪ್ರತಿ ಮಾಹಿತಿಗಾಗಿ**

1. ರಾಜ್ಯ ಯೋಜನಾ ನಿರ್ದೇಶಕರಿಗೆ ಮಾಹಿತಿಗಾಗಿ
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ- ಅನುಪಾಲನೆಗಾಗಿ ಕಳುಹಿಸಿದೆ.
4. ಕಚೇರಿ ಪ್ರತಿ

# ಅನುಬಂಧ

## 2013–14 ನೇ ಸಾಲಿನಲ್ಲಿ ಮೀನಾ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಮಾರ್ಗಸೂಚಿ

**ಮೀನಾ ಕಾರ್ಯಕ್ರಮದ ಕುರಿತು :** ಚುರುಕಾದ ಹಾಗೂ ಉತ್ತಮ ಸಂವಹನ ಸಾಮರ್ಥ್ಯ ಹೊಂದಿದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರನ್ನು ಒಳಗೊಂಡ ಒಂದು ತಂಡವನ್ನು 'ಮೀನಾ ತಂಡ' ಎಂದು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ರಚಿಸಿ, ಈ ತಂಡದ ಮೂಲಕ ತಾವು ವಾಸಿಸುವ ಗ್ರಾಮಗಳಲ್ಲಿ ಬಾಲಕಿಯರ ಶಿಕ್ಷಣಕ್ಕೆ ಉತ್ತೇಜನವನ್ನು ನೀಡುವ ಗುರಿಯನ್ನು ಈ ಕಾರ್ಯಕ್ರಮ ಹೊಂದಿದೆ. ಮೀನಾ ತಂಡದಲ್ಲಿ ಕಾರ್ಯನಿರ್ವಹಿಸುವ ಮೂಲಕ ಬಾಲಕ, ಬಾಲಕಿಯರು ಧೈರ್ಯ, ಉತ್ತಮ ಸಂವಹನ, ಜೀವನ ಕೌಶಲ ಹಾಗೂ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳುತ್ತಾರೆ.

**ಮೀನಾ ಕಾರ್ಯಕ್ರಮದ ಉದ್ದೇಶಗಳು:** ಬಾಲಕಿಯರಲ್ಲಿ ಸಹಜವಾಗಿ ಇರುವ ನಾಚಿಕೆ ಸ್ವಭಾವದ ಕಾರಣದಿಂದ ಶಾಲಾ ಚಟುವಟಿಕೆಗಳಲ್ಲಿ ಕಡಿಮೆ ಪಾಲ್ಗೊಳ್ಳುತ್ತಾರೆ. ಇಂತಹ ಬಾಲಕಿಯರು ತಮ್ಮ ಅವಶ್ಯಕತೆಗಳಿಗೆ ತಕ್ಕಂತೆ ಜವಾಬ್ದಾರಿಗಳನ್ನು ನಿಭಾಯಿಸಲು ಮೀನಾ ತಂಡಗಳು ಅವಕಾಶ ಕಲ್ಪಿಸುತ್ತವೆ. ಶಾಲೆಯ ನೈರ್ಮಲ್ಯ, ಶುದ್ಧ ಕುಡಿಯುವ ನೀರು, ಮಧ್ಯಾಹ್ನದ ಉಪಹಾರ ಯೋಜನೆ, ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ನಾಯಕತ್ವವನ್ನು ಮೀನ ತಂಡದ ಮಕ್ಕಳು ವಹಿಸುತ್ತಾರೆ. ಶಿಕ್ಷಣದ ಬಗ್ಗೆ ಅದರಲ್ಲಿಯೂ ವಿಶೇಷವಾಗಿ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ರೂಪಕ, ಬೀದಿ ನಾಟಕ, ಹಾಡು, ಕವಿತೆ ವಾಚನ, ಯಕ್ಷಗಾನ, ಬೊಂಬೆಯಾಟ ಇತ್ಯಾದಿ ಚಟುವಟಿಕೆಗಳ ಮೂಲಕ ಸಮುದಾಯದಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ಮೀನಾ ತಂಡದ ಮಕ್ಕಳು ನಿರ್ವಹಿಸಬೇಕಾಗುತ್ತದೆ.

- ಶೇ 100 ರಷ್ಟು ಮಕ್ಕಳ ಅದರಲ್ಲೂ ವಿಶೇಷವಾಗಿ ಬಾಲಕಿಯರ ದಾಖಲಾತಿ ಮತ್ತು ಹಾಜರಾತಿಯನ್ನು ಖಾತ್ರಿ ಪಡಿಸಿಕೊಳ್ಳುವುದು.
- ತರಗತಿ, ಶಾಲೆ ಹಾಗೂ ಸಮುದಾಯದಲ್ಲಿ ಹೆಣ್ಣುಮಕ್ಕಳ ಪಾಲ್ಗೊಳ್ಳುವಿಕೆಯನ್ನು ಉತ್ತಮಪಡಿಸುವುದು.
- ಸಮುದಾಯದಲ್ಲಿ ಜಾರಿಯಲ್ಲಿರುವ ಸಾಮಾಜಿಕ ಪಿಡುಗುಗಳಾದ ವರದಕ್ಷಿಣೆ, ಬಾಲ್ಯವಿವಾಹ, ಬಾಲಕಾರ್ಮಿಕತೆ, ಲಿಂಗತಾರತಮ್ಯ ಇತ್ಯಾದಿಗಳ ವಿರುದ್ಧ ಸಮುದಾಯದಲ್ಲಿ ಜಾಗೃತಿ ಮೂಡಿಸಿ, ಅವುಗಳ ನಿವಾರಣೆಗೆ ಅಗತ್ಯ ವಾತಾವರಣ ಸೃಷ್ಟಿಸುವುದು.

**ಮೀನಾ ತಂಡದ ರಚನೆ ಹಾಗೂ ಕಾರ್ಯನಿರ್ವಹಿಸುವಿಕೆ :**

- ಶಾಲೆಯಲ್ಲಿರುವ ಚುರುಕಾದ ಹಾಗೂ ಉತ್ತಮ ಸಂವಹನ ಸಾಮರ್ಥ್ಯ ಹೊಂದಿದ 10 ಬಾಲಕಿಯರು, 05 ಬಾಲಕರು ಹಾಗೂ 5 ಸತತವಾಗಿ ಗೈರು ಹಾಜರಾಗುತ್ತಿರುವ ಬಾಲಕಿಯರನ್ನು ಒಳಗೊಂಡಂತೆ ಮೀನಾ ತಂಡವನ್ನು ರಚಿಸಬೇಕು ಪ್ರತಿ ತರಗತಿಯಿಂದ ಕೆಲವು ಮಕ್ಕಳನ್ನು ಸಂಬಂಧಿಸಿದ ಶಾಲಾ ಶಿಕ್ಷಕರ ನೆರವಿನಿಂದ ಆಯ್ಕೆ ಮಾಡಬೇಕು.
- ಮೀನಾ ತಂಡದ ರಚನೆಯನ್ನು ಸಂಬಂಧಿಸಿದ ಶಾಲೆಯ ಮುಖ್ಯ ಶಿಕ್ಷಕರು ಮಾಡಬೇಕು. ಮೀನಾ ತಂಡದ ಉಸ್ತುವಾರಿಗೆ ಒಬ್ಬ ಮಹಿಳಾ ಶಿಕ್ಷಕರನ್ನು ನೇಮಿಸಬೇಕು. ಮಹಿಳಾ ಶಿಕ್ಷಕರು ಇಲ್ಲದಿದ್ದರೆ ಪುರುಷ ಶಿಕ್ಷಕರೆ ಮೀನಾ ತಂಡದ ಉಸ್ತುವಾರಿ ಮಾಡಬೇಕು. ಮೀನಾ ತಂಡದಲ್ಲಿ ಅತ್ಯಂತ ಚುರುಕಾಗಿರುವ ಒಬ್ಬ ಬಾಲಕಿಯನ್ನು ಮೀನಾ ತಂಡದ ಪ್ರೇರಕಿಯಾಗಿ ನೇಮಿಸಬೇಕು.

- ಮೀನಾ ತಂಡವು ವಾರಕ್ಕೆ ಒಮ್ಮೆ ಸಭೆ ಸೇರಬೇಕು. ಯಾವ ರೀತಿಯ ಚಟುವಟಿಕೆ/ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂಬ ಬಗ್ಗೆ ಒಂದು ಕ್ರಿಯಾ ಯೋಜನೆಯನ್ನು ಸಭೆಯಲ್ಲಿ ಚರ್ಚಿಸಿ, ತೀರ್ಮಾನಿಸಿ, ಕಾರ್ಯಪ್ರವೃತ್ತರಾಗಬೇಕು. ಮೀನಾ ತಂಡದ ಚಟುವಟಿಕೆಗಳಿಗೆ ಶಾಲೆಯ ಒಂದು ಕೊಠಡಿಯನ್ನು ಮೀಸಲಿರಿಸಬೇಕು.
- ಮನೆ ಮನೆ ಭೇಟಿ : ಶಾಲೆಗೆ ದಾಖಲಾಗದ ಹಾಗೂ ನಿರಂತರವಾಗಿ ಗೈರುಹಾಜರಾಗುವ ಮಕ್ಕಳ ಮನೆಗೆ ಮೀನಾ ತಂಡದ ಸದಸ್ಯರು ಸಂಬಂಧಿಸಿದ ಶಿಕ್ಷಕರೊಡನೆ ಭೇಟಿ ನೀಡಿ, ಪೋಷಕರೊಂದಿಗೆ ಸಂವಾದ ಕೈಗೊಂಡು, ಮನ ಒಲಿಸಿ ಶಾಲೆಗೆ ಕರೆತರುವುದು.
- ಶಾಲಾ ದಾಖಲಾತಿ ಆಂದೋಲನದಲ್ಲಿ ಭಾಗಿ : ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರಲು ಅವಶ್ಯಕವಾದ ಶಾಲಾ ದಾಖಲಾತಿ ಆಂದೋಲನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು.
- ತಾಯಿ-ಮಗಳು ಮೇಳ: ತಾಯಿ-ಮಗಳು ಮೇಳ (ಮಾ-ಭೇಟಿ ಮೇಳ) ಗಳನ್ನು ಆಯೋಜಿಸಿ, ಸಕ್ರಿಯವಾಗಿ ಪಾಲ್ಗೊಳ್ಳುವುದು.
- ತಾಯಂದಿರ ದಿನಾಚರಣೆ/ಅಜ್ಜಿಯಂದಿರ ದಿನಾಚರಣೆ: ತಾಯಂದಿರ ದಿನಾಚರಣೆ/ಅಜ್ಜಿಯಂದಿರ ದಿನಾಚರಣೆಗಳನ್ನು ಹಮ್ಮಿಕೊಂಡು, ಬಾಲಕಿಯರಿಗೆ ಶಿಕ್ಷಣದ ಪ್ರಾಮುಖ್ಯತೆ ಹಾಗೂ ಬಾಲಕಿಯರಿಗೆ ಶಿಕ್ಷಣ ನೀಡುವಲ್ಲಿ ತಾಯಂದಿರು/ಅಜ್ಜಿಯರು ನಿರ್ವಹಿಸಬೇಕಾದ ಜವಾಬ್ದಾರಿಯ ಬಗ್ಗೆ ಮಾತನಾಡಬೇಕು.
- ಮಕ್ಕಳ ಗ್ರಾಮ ಸಭೆ : ಮಕ್ಕಳ ಹಕ್ಕುಗಳ ಬಗ್ಗೆ ಚರ್ಚಿಸಲು ಹಾಗೂ ಮಕ್ಕಳ ಹಕ್ಕುಗಳು ಗ್ರಾಮದಲ್ಲಿ ರಕ್ಷಣೆಯಾಗುತ್ತಿರುವ ಬಗ್ಗೆ ಚರ್ಚಿಸಲು ವಿಶೇಷವಾದ ಮಕ್ಕಳ ಗ್ರಾಮಸಭೆಯನ್ನು ಆಯೋಜಿಸುವುದು.
- ಬ್ಲಾಕ್/ಕ್ಲಸ್ಟರ್ ಹಂತದಲ್ಲಿ ಮೀನಾ ಮೇಳ: ಬ್ಲಾಕ್/ಕ್ಲಸ್ಟರ್ ಹಂತದಲ್ಲಿ ವರ್ಷಕ್ಕೊಮ್ಮೆ ಮೀನಾ ಮೇಳವನ್ನು ಆಯೋಜಿಸುವುದು. ಬ್ಲಾಕ್/ಕ್ಲಸ್ಟರ್‌ನ ಎಲ್ಲಾ ಮೀನಾ ತಂಡಗಳು ಇದರಲ್ಲಿ ಸಕ್ರಿಯವಾಗಿ ಭಾಗವಹಿಸಿ, ಸಮುದಾಯದಲ್ಲಿ ಜಾಗೃತಿಯನ್ನು ತರಲು ಅಗತ್ಯ ಚಟುವಟಿಕೆ/ಆಟಗಳನ್ನು ಹಮ್ಮಿಕೊಂಡು ಪ್ರದರ್ಶಿಸುವುದು. ಈ ಸಂದರ್ಭದಲ್ಲಿ ಸಮುದಾಯದಲ್ಲಿ ಹೆಚ್ಚಿನ ಜನ ಭಾಗವಹಿಸುವಂತೆ ಪ್ರಚಾರ ನೀಡುವುದು.
- ನೈರ್ಮಲ್ಯ ಆಂದೋಲನ, ಆರೋಗ್ಯ ಆಂದೋಲನ, ಬಾಲ್ಯ ವಿವಾಹ ತಡೆಗಟ್ಟುವುದು, ವರದಕ್ಷಿಣೆ ಶೋಷಣೆ ಬಗ್ಗೆ ಜಾಗೃತಿ, ಮನೆಯಲ್ಲಿ ಶೋಷಣೆ ಬಗ್ಗೆ ಜಾಗೃತಿ, ಶಾಲಾ ಸ್ವಚ್ಛತೆ, ನಾಯಕತ್ವ ಬೆಳವಣಿಗೆ, ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಮಹತ್ವ, ಶಾಲೆಯಲ್ಲಿ ಮೀನಾ ತಂಡದ ಮಕ್ಕಳ ವಿಚಾರ ಗೋಷ್ಠಿಗಳು, ಬಾಲಕಿಯರ ಶಿಕ್ಷಣದ ಮಹತ್ವ ಕುರಿತು ಚರ್ಚಾ ಸ್ಪರ್ಧೆ, ಪಾತ್ರಾಭಿನಯಗಳು, ಬೀದಿ ನಾಟಕಗಳು, ಸ್ವಚ್ಛತೆ ಜಾಥಗಳು, ಮೀನಾ ತಂಡದ ಮಕ್ಕಳ ಕಲಾ ತಂಡದಿಂದ ಸಮುದಾಯದ ಜಾಗೃತಿ ಚಟುವಟಿಕೆ, ಮೀನಾ ತಂಡದ ಮಕ್ಕಳಿಂದ ಅಣುಕು ಗ್ರಾಮ ಸಭೆ, ಜೀತ ಮತ್ತು ಕೂಲಿಯಿಂದ ಮಕ್ಕಳನ್ನು ಮುಕ್ತಗೊಳಿಸುವುದು-ಇತ್ಯಾದಿ ಚಟುವಟಿಕೆಗಳನ್ನು ಮೀನಾ ತಂಡದ ಮೂಲಕ ಹಮ್ಮಿಕೊಳ್ಳುವುದು.
- ಮೀನಾ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಶಿಕ್ಷಕರಲ್ಲಿ ಸ್ಪಷ್ಟ ಪರಿಕಲ್ಪನೆ ಮೂಡಿಸಲು ಮೀನಾ ಕಾರ್ಯಕ್ರಮದ ಕುರಿತು ಶಿಕ್ಷಕರಿಗೆ ಮತ್ತು ಮೀನಾ ತಂಡದ ಸದಸ್ಯರಿಗೆ ಕ್ಲಸ್ಟರ್ ಹಂತದಲ್ಲಿ ತರಬೇತಿ ನೀಡುವುದು. ಈ ತರಬೇತಿಯನ್ನು ಸಿ.ಆರ್.ಪಿ.ಗಳು ಸಂಘಟಿಸುವುದು.
- ಹೆಣ್ಣು ಮಕ್ಕಳ ಶಿಕ್ಷಣದ ಪ್ರಾಮುಖ್ಯತೆ, ಬಾಲ್ಯ ವಿವಾಹ, ವರದಕ್ಷಿಣೆ ಇತ್ಯಾದಿಗಳ ಬಗ್ಗೆ ಅರಿವು ಮೂಡಿಸಲು ಕರಪತ್ರಗಳನ್ನು ಮುದ್ರಿಸಿ, ಸಮುದಾಯದ ಜನರಿಗೆ ವಿತರಿಸಿ, ಅಗತ್ಯ ಜಾಗೃತಿ ಮೂಡಿಸುವುದು.

ಹೊಸ ಸಾರ್ವಜನಿಕ ಕಛೇರಿಗಳು, ಕೆ.ಆರ್. ವೃತ್ತ, ಬೆಂಗಳೂರು – 560 001

- ಶಾಲಾ ಹಂತದಲ್ಲಿ ತಿಂಗಳಿಗೆ ಕನಿಷ್ಟ ಒಂದು ಕಾರ್ಯಕ್ರಮವನ್ನು ನಡೆಸಲು ಅವಕಾಶ ಮಾಡಿಕೊಡುವುದು. ಅಂತರ ಶಾಲಾ ಮೀನಾ ತಂಡಗಳ ಕಾರ್ಯಕ್ರಮ ನಡೆಸಲು ಸಿ.ಆರ್.ಪಿ ಜವಾಬ್ದಾರಿ ವಹಿಸುವುದು.
- ಮೀನಾ ತಂಡಗಳು ತಮ್ಮ ತಮ್ಮ ಶಾಲಾ ಹಂತದಲ್ಲಿ ತಮ್ಮ ಯಶೋಗಾಥೆಗಳನ್ನು ಅನುಭವಗಳನ್ನು ಹಂಚಿಕೊಳ್ಳಲು ವ್ಯವಸ್ಥೆ ಮಾಡುವುದು. ಈ ಮೇಳವು ಸಂಪೂರ್ಣವಾಗಿ ಮಕ್ಕಳೇ ಆಯೋಜಿಸಿ ನಡೆಸುವ ರೀತಿಯಲ್ಲಿರಬೇಕು. ವೇದಿಕೆಯಲ್ಲೂ ಸಹ ಮಕ್ಕಳೇ ಹೆಚ್ಚಿನ ಸಂಖ್ಯೆಯುಲ್ಲಿರಬೇಕು. ಈ ಮೇಳದಲ್ಲಿ ಹೆಣ್ಣು ಮಕ್ಕಳ ಹಾಗೂ ಮಕ್ಕಳ ಶಿಕ್ಷಣಕ್ಕೆ ಇರುವ ಅಡ್ಡಿಗಳನ್ನು ಕುರಿತು ಮಕ್ಕಳೇ ಚರ್ಚಿಸಿ ಗೊತ್ತುವಳಿಯನ್ನು ನಿರ್ಣಯಿಸಿ ಸಿದ್ಧಪಡಿಸಿದ ವರದಿಯನ್ನು ಜಿಲ್ಲಾ ಹಂತದಲ್ಲಿ ಕ್ರೋಢಿಕರಿಸಿ ಈ ಕಚೇರಿಗೆ ಸಲ್ಲಿಸುವುದು.

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ

ದೂರವಾಣಿ : 080 22483040, 22483041 ಫ್ಯಾಕ್ಸ್ : 22126718 www.schooleducation.kar.nic.in/SSA